**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:12:ವರ್ಗಾವಣೆ:2023-24:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:01.06.2023

**ಸುತ್ತೋಲೆ**

ವಿಷಯ: 2023-24ನೇ ಸಾಲಿನ ಗ್ರೂಪ್ ಎ, ಬಿ & ಸಿ ವರ್ಗದ ಬೋಧಕೇತರ ವರ್ಗಾವಣೆ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:7:ಸೇನೌವ:2023, ಬೆಂಗಳೂರು, ದಿನಾಂಕ:30.05.2023.

2. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ:22:ಸೇನೌವ:2013, ಬೆಂಗಳೂರು, ದಿನಾಂಕ:07.06.2013.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ದಿನಾಂಕ:07.06.2013 ರ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ಷರತ್ತುಗಳೊಂದಿಗೆ 2023-24ನೇ ಸಾಲಿಗೆ ಗ್ರೂಪ್ ಎ, ಬಿ, ಸಿ ಮತ್ತು ಗ್ರೂಪ್ – ಡಿ ವರ್ಗದ ಅಧಿಕಾರಿ/ನೌಕರರಿಗೆ ಮಾತ್ರ ಅನ್ವಯವಾಗುವಂತೆ ಮಿತಿಗೊಳಿಸಿ ಒಂದು ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇಕಡಾ 6 ಅನ್ನು ಮೀರದಂತೆ ದಿನಾಂಕ:15.06.2023 ರವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು/ಕಛೇರಿಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಲ್ಲಿ ಪ್ರಸ್ತುತ ಕರ್ತವ್ಯನಿರ್ವಹಿಸುತ್ತಿರುವ ಹುದ್ದೆಯಲ್ಲಿ ಈ ಸುತ್ತೋಲೆ ಹೊರಡಿಸಿದ ದಿನಾಂಕಕ್ಕೆ ನಿಗದಿತ ಕಾಲಾವಧಿ ಪೂರೈಸಿರುವ ಗ್ರೂಪ್ ಎ, ಬಿ, ಸಿ ಮತ್ತು ಗ್ರೂಪ್ ಡಿ ವೃಂದದವರು ನಿಖರವಾದ ಮಾಹಿತಿಯನ್ನೊಳಗೊಂಡ ಕೋರಿಕೆ ಅರ್ಜಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ದಿನಾಂಕ:07.06.2023ರ ಒಳಗಾಗಿ **nonteaching.transfer2023@gmail.com** ವಿಳಾಸಕ್ಕೆ ಇಮೇಲ್ ಮೂಲಕ ಸಲ್ಲಿಸುವಂತೆ ಸೂಚಿಸಿದೆ. ಭೌತಿಕವಾಗಿ ಸಲ್ಲಿಸುವ ಮತ್ತು ಕೊನೆಯ ದಿನಾಂಕದ ನಂತರ ಸಲ್ಲಿಸುವ ಹಾಗೂ ಅಪೂರ್ಣ ಮಾಹಿತಿಯ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

ಇವರಿಗೆ– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

1. ಎಲ್ಲಾ ಪ್ರಾದೇಶಿಕ ಜಂಟಿನಿರ್ದೇಶಕರುಗಳ ಕಛೇರಿಗಳಿಗೆ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು – ಮಾಹಿತಿಗಾಗಿ.

1. ಕೇಂದ್ರ ಕಛೇರಿಯ ಎಲ್ಲಾ ಮೇಲಧಿಕಾರಿಗಳ ಆಪ್ತ ಶಾಖೆಗಳಿಗೆ
2. ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಮ್ಯಾನೇಜರ್/ಅಧೀಕ್ಷಕರುಗಳಿಗೆ
3. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
4. ಕಛೇರಿ ಪ್ರತಿ.

## 2023 -24ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆ ಅರ್ಜಿ

| | | |
|---|---|---|
| 1 | ಬೋಧಕೇತರ ಸಿಬ್ಬಂದಿಯ ಹೆಸರು: | |
| 2 | ವೃಂದ (ಎ, ಬಿ, ಸಿ, ಡಿ): | |
| 3 | ಪದನಾಮ: | |
| 4 | ಕೆ.ಜಿ.ಐ.ಡಿ ಸಂಖ್ಯೆ: | |
| 5 | ಜನ್ಮ ದಿನಾಂಕ: | |
| 6 | ಲೀನ್ ಹೊಂದಿರುವ ಕಾಲೇಜು/ಕಛೇರಿ | |
| 7 | ಲೀನ್ ಹೊಂದಿರುವ ಕಾಲೇಜು/ಕಛೇರಿಯಲ್ಲಿ ಪ್ರಸ್ತುತ ಹುದ್ದೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ದಿನಾಂಕ | |
| 8 | ಕೋರಿಕೆ ವರ್ಗಾವಣೆ ವಿವರ<br>1. ವಿಶೇಷ ಚೇತನರು<br>2. ಗಂಭೀರ ಖಾಯಿಲೆ ಪ್ರಕರಣಗಳು<br>3. ವಿಧವಾ ಪ್ರಕರಣ<br>4. ಪತಿ-ಪತ್ನಿ ಪ್ರಕರಣ<br>5. ಸಾಮಾನ್ಯ | |
| 9 | ವರ್ಗಾವಣೆ ಕೋರುವ ಸ್ಥಳ/ಕಾಲೇಜು/ಕಛೇರಿ | 1.<br>2.<br>3. |
| 10 | ಷರಾ | |

ದಿನಾಂಕ: ಬೋಧಕೇತರ ಸಿಬ್ಬಂದಿ ಸಹಿ

ಮೇಲ್ಕಂಡ ವಿವರಗಳು ಸರಿಯಾಗಿರುತ್ತದೆ ಎಂದು ದೃಢೀಕರಿಸಿದೆ.

ದಿನಾಂಕ: ಪ್ರಾಂಶುಪಾಲರು/ಜಂಟಿನಿರ್ದೇಶಕರ ಸಹಿ

ಮೊಹರಿನೊಂದಿಗೆ

<u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:</u>

| | |
|---|---|
| ವಿಶೇಷ ಚೇತನರು | ಜಿಲ್ಲಾ ವೈದ್ಯಕೀಯ ಮಂಡಳಿ / ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ |
| ಗಂಭೀರ ಖಾಯಿಲೆ ಪ್ರಕರಣಗಳು | ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ |
| ವಿಧವಾ ಪ್ರಕರಣ | 1. ಪತಿಯ ಮರಣ ಪ್ರಮಾಣ ಪತ್ರ<br>2. ಮರು ವಿವಾಹವಾಗಿಲ್ಲದ ಬಗ್ಗೆ ಅಫಿಡೆವಿಟ್ |
| ಪತಿ-ಪತ್ನಿ ಪ್ರಕರಣಗಳು | ಪತಿ/ಪತ್ನಿ ಸರ್ಕಾರಿ ನೌಕರರಾಗಿರುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಸೇವಾ ಪ್ರಮಾಣ ಪತ್ರ |